





(6ನೇ ಪುಟದಿಂದ)

**ಮೂ**ಲತಃ ಮೈಸೂರಿನಲ್ಲಿ ನೆಲೆಸಿರುವ ಕೆ.ಎನ್. ಜೀವಂದರ್ ಕುಮಾರ್ ವೃತ್ತಿಯಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಕೇಂದ್ರೀಯ ವಿದ್ಯಾಲಯ ಸಂಘಟನ್‌ನಲ್ಲಿ ಶಿಕ್ಷಕರಾಗಿದ್ದವರು. ನಿವೃತ್ತಿಯ ಬಳಿಕ ಈಗಲೂ ಖಾಸಗಿ ಸಂಸ್ಥೆಯಲ್ಲಿ ಶಿಕ್ಷಕರಾಗಿ ದುಡಿಯುತ್ತಿದ್ದಾರೆ. ಇವರ ನೆಚ್ಚಿನ ಹವ್ಯಾಸ ಫೋಟೋಗ್ರಫಿ. ಪ್ರಕೃತಿಯನ್ನೇ ತನ್ನ ಜೀವ ಎಂದುಕೊಂಡಿರುವ ಇವರು, ಪ್ರಾಣಿಗಳು, ಪಕ್ಷಿಗಳು, ಗಿಡಮರಗಳು, ಚಿಟ್ಟೆಗಳ ಸಾವಿರಾರು ಚಿತ್ರಗಳನ್ನು ಕ್ಲಿಕ್ಕಿಸಿದ್ದಾರೆ. ‘ವೈಲ್ಡ್‌ಲೈಫ್ ಫೋಟೋಗ್ರಾಫರ್’ ಆಗಿ ಹೆಸರು ಪಡೆದಿದ್ದು, ಬ್ಲಾಗ್ ಮೂಲಕ ತಮ್ಮ ಫೋಟೋಗಳಿಗೆ ಅಪಾರ ಅಭಿಮಾನಿಗಳನ್ನೂ ಹೊಂದಿದ್ದಾರೆ. ಇವರ ಬ್ಲಾಗ್‌ನಲ್ಲಿ ನಮ್ಮ ದೇಶದ ವೈವಿಧ್ಯಮಯ ಪಕ್ಷಿಗಳ ಸಂಪೂರ್ಣ ವಿವರಗಳು, ಸಣ್ಣ–ಪುಟ್ಟ ಮಾಹಿತಿಗಳೂ ಸಿಗುತ್ತವೆ.

ಜೀವಂಧರ್ ಅವರ ಮೂಲ ಆಸಕ್ತಿ ಇತಿಹಾಸ ಮತ್ತು ಜೀವಶಾಸ್ತ್ರ. ಫೋಟೋಗ್ರಫಿಯಲ್ಲೂ ಈ ಮೂಲ ಆಸಕ್ತಿಯ ಕುರುಹುಗಳು ಗೋಚರಿಸುತ್ತವೆ. ಊರೂರು ತಿರುಗುವಾಗ ಹಳ್ಳಿಗಳ ಹಳೇಮನೆಗಳಿಗೆ ಭೇಟಿ ನೀಡಿ ಅವುಗಳ ಇತಿಹಾಸವನ್ನು ದಾಖಲಿಸುವುದು ಇವರ ಇನ್ನೊಂದು ಹವ್ಯಾಸ.

ಛಾಯಾಗ್ರಾಹಕರಿಗೆ ನಮ್ಮ ಮಲೆನಾಡು ಮತ್ತು ಪಶ್ಚಿಮಘಟ್ಟ ಅತ್ಯದ್ಭುತ ಆಶ್ರಯತಾಣ ಎನ್ನುವುದು ಜೀವಂಧರ್ ಅವರ ಖಚಿತ ನಂಬಿಕೆ. ಪಶ್ಚಿಮ ಘಟ್ಟದ ಪ್ರತಿಯೊಂದು ಪ್ರದೇಶ, ಪ್ರಾಣಿ, ಪಕ್ಷಿ, ಚಿಟ್ಟೆಗಳ ಬಗ್ಗೆ ಸಂಪೂರ್ಣ ಮಾಹಿತಿ, ವಿವರಗಳನ್ನು ಸಂಗ್ರಹಿಸಿದ್ದಾರೆ. ಆಯಾ ಪಕ್ಷಿಗಳ ವಾಸಸ್ಥಾನ, ಅದರ ಗುಣಗಳನ್ನು ಪಟ್ಟಿ ಮಾಡಿದ್ದಾರೆ. ಅಂದ ಹಾಗೆ ಇವರ ನೆಚ್ಚಿನ ಪಕ್ಷಿ ಹಾರ್ನ್‌ಬಿಲ್. (ಹಕ್ಕಿಗಳ ಕುರಿತ ವಿಶೇಷ ಮಾಹಿತಿಗೆ ಸಂಪರ್ಕಕ್ಕೆ: 8277120232. ರಾತ್ರಿ 8.30ರಿಂದ 9.30ರವರೆಗೆ ಮಾತ್ರ.)